## ನಿಮ್ಮೊಡನೆ

# ಪಿಯು ದಾಖಲೆ ಫಲಿತಾಂಶ: ಶಿಕ್ಷಣ ಇಲಾಖೆಯ ಮುಂದಿದೆ ಪ್ರವೇಶ ದೊರಕಿಸುವ ಸವಾಲು

**ಅಂಕಗಳಿಗೆ ಅಂಕೆ ಇಲ್ಲ. ಈ ಸಲದ ಪಿಯು ಫಲಿತಾಂಶ ನೋಡಿದವರಿಗೆ ಒಂದು ಕ್ಷಣ ಹಾಗೆ ಅನ್ನಿಸಿರಲಿಕ್ಕೆ ಸಾಕು! ಶೇಕಡ 90ರ ಗಡಿ ದಾಟಿದವರ ಸಂಖ್ಯೆ ದೊಡ್ಡ ಮಟ್ಟದಲ್ಲಿದೆ. ಹಾಗೆಂದು ಅನುತ್ತೀರ್ಣರಾದವರು 'ಬದುಕು ಇಲ್ಲಿಗೆ ಮುಗಿಯಿತು' ಎಂದೇನೂ ಭಾವಿಸಬೇಕಾಗಿಲ್ಲ. ಸಣ್ಣ ಅಡೆತಡೆಗಳು ಎದುರಾದಾಗ ಭರವಸೆ ಕಳೆದುಕೊಳ್ಳದಿರುವುದೇ ಭವಿಷ್ಯದ ಬದುಕಿಗೆ ಸೋಪಾನ.**



ಈಶ್ವರ್

ಅಂಕಗಳಿಗೆ ಅಂಕೆಯೇ ಇಲ್ಲ! ಈ ಸಲದ ದ್ವಿತೀಯ ಪಿಯು ಪರೀಕ್ಷಾ ಫಲಿತಾಂಶ ನೋಡಿದವರಿಗೆ ಒಂದು ಕ್ಷಣ ಹಾಗೆ ಅನ್ನಿಸಿರಲಿಕ್ಕೆ ಸಾಕು! ನೂರಕ್ಕೆ ಎಂಬತ್ತು ಅಂಕಗಳು ಈಗ ಏನೇನೂ ಅಲ್ಲ. ಶೇಕಡ 90ರ ಗಡಿ ದಾಟಿದವರ ಸಂಖ್ಯೆ ದೊಡ್ಡ ಮಟ್ಟದಲ್ಲಿದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಪದವಿಪೂರ್ವ ಶಿಕ್ಷಣದ ಇತಿಹಾಸದಲ್ಲಿಯೇ ದಾಖಲೆ ಫಲಿತಾಂಶ. ಶೇ. 81.15ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿ ಪೋಷಕರಲ್ಲಿ ಹೊಸ ಭರವಸೆ ಮೂಡಿಸಿದ್ದಾರೆ, ಬೋಧಕರ ಮುಖ ಅರಳಿಸಿದ್ದಾರೆ, ಕಾಲೇಜು ಆವರಣಗಳಲ್ಲಿ ಹರ್ಷದ ಹೊನಲು ಹರಿಸಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಫಲಿತಾಂಶದಲ್ಲಿ ಶೇ. 6.48ರಷ್ಟು ಹೆಚ್ಚಳ ಆಗಿದೆ. ಯಾವುದೇ ನೆಲೆಯಿಂದ ಯೋಚಿಸಿದರೂ ಇದು ದೊಡ್ಡ ಮಟ್ಟದ ಹೆಚ್ಚಳ ಎಂಬುದರಲ್ಲಿ ಅನುಮಾನವೇ ಇಲ್ಲ. ಸರ್ಕಾರಿ ಕಾಲೇಜುಗಳೂ ಸೇರಿ ಒಟ್ಟು 463 ಕಾಲೇಜುಗಳು ಶೇ. 100ರಷ್ಟು ಫಲಿತಾಂಶ ಸಾಧಿಸಿವೆ.

ಪರೀಕ್ಷೆ ಬರೆದಿದ್ದ 6.81 ಲಕ್ಷ ವಿದ್ಯಾರ್ಥಿಗಳ ಪೈಕಿ 5.52 ಲಕ್ಷ ವಿದ್ಯಾರ್ಥಿಗಳು ತೇರ್ಗಡೆ ಆಗಿರುವುದರಿಂದ, ಮುಂದಿನ ಶೈಕ್ಷಣಿಕ ಋತುವಿನಲ್ಲಿ ಪದವಿ ಕಾಲೇಜುಗಳ ಪ್ರವೇಶಕ್ಕೆ ನೂಕುನುಗ್ಗಲು ಉಂಟಾಗಲಿದೆ. ಇವರಿಗೆಲ್ಲ ಪ್ರವೇಶ ದೊರಕಿಸಿಕೊಡುವುದು ಸವಾಲಿನ ಕೆಲಸ. ವಿದ್ಯಾರ್ಥಿ ಜೀವನದಲ್ಲಿ ಪಿಯುಸಿ ಮಹತ್ವದ ಘಟ್ಟ, ಉನ್ನತ ಶಿಕ್ಷಣಕ್ಕೆ ಮೆಟ್ಟಿಲು. ದ್ವಿತೀಯ ಪಿಯು ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಬೇಕೆಂಬ ಹಂಬಲದ ಹಿಂದೆ ಇರುವ ಪ್ರಧಾನ ಉದ್ದೇಶ– ಅತ್ಯುತ್ತಮ ಕಾಲೇಜಿನಲ್ಲಿ, ಹೆಚ್ಚು ಬೇಡಿಕೆಯುಳ್ಳ ಕೋರ್ಸ್‌ಗೆ ಪ್ರವೇಶ ಗಿಟ್ಟಿಸುವುದು. ಒಳ್ಳೆಯ ನೌಕರಿ, ಹೆಚ್ಚು ಸಂಬಳದಂತಹ ಹಂಬಲ ಇದರೊಂದಿಗೆ ಅಂತರ್ಗತವಾಗಿ ಬೆಸೆದುಕೊಂಡಿರುತ್ತವೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ.

ಆದರೆ ತೇರ್ಗಡೆ ಹೊಂದಿದ ಎಲ್ಲರಿಗೂ ತಾವು ಬಯಸಿದ ಕಾಲೇಜಿನಲ್ಲಿ ತಮಗೆ ಇಷ್ಟವಾದ ಕೋರ್ಸ್‌ಗೆ ಪ್ರವೇಶ ಸಿಗುವ ಖಾತರಿ ಇಲ್ಲ. ಸ್ಪರ್ಧೆ ಈ ಸಲ ಮತ್ತಷ್ಟು ತುರುಸು ಪಡೆಯಲಿದೆ. ಈಗಿನ ಸನ್ನಿವೇಶದಲ್ಲಿ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕೋರ್ಸ್‌ಗಳಿಗೆ ಹೆಚ್ಚು ಬೇಡಿಕೆ ಇದೆ. ಇಂತಹ ಕೆಲವು ಕೋರ್ಸ್‌ಗಳಿಗೆ ಪ್ರವೇಶ ಗಿಟ್ಟಿಸಲು ಸಾಧ್ಯವಾಗದವರಿಗೂ ಉನ್ನತ ಶಿಕ್ಷಣಕ್ಕೆ ಅನುವು ಮಾಡಿಕೊಡುವ ಸವಾಲು ಶಿಕ್ಷಣ ಇಲಾಖೆಯ ಎದುರಿಗಿದೆ. ಈ ಸವಾಲನ್ನು ನಿಭಾಯಿಸಲು ಅದು ಸನ್ನದ್ಧವಾಗಬೇಕು. ಸರ್ಕಾರಿ ಕಾಲೇಜುಗಳನ್ನು ಅಣಿಗೊಳಿಸಬೇಕು.

ಮುಂದೆ ಏನು ಓದಿದರೆ ಒಳ್ಳೆಯದು ಎಂಬುದರ ಬಗ್ಗೆ ನಗರ ಪ್ರದೇಶದ ವಿದ್ಯಾರ್ಥಿಗಳಲ್ಲಿ ತಕ್ಕಮಟ್ಟಿಗೆ ಸ್ಪಷ್ಟತೆ ಇರುತ್ತದೆ. ಆದರೆ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಲ್ಲಿ ಈಗಲೂ ಸ್ಪಷ್ಟತೆಯ ಕೊರತೆ ಇದೆ. ವಿದ್ಯಾರ್ಥಿಗಳ ಸಾಮಾಜಿಕ ಹಿನ್ನೆಲೆ ಇಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತದೆ. ಶಿಕ್ಷಣಕ್ಕೆ ಒತ್ತು ಸಿಗದ ಹಿನ್ನೆಲೆಯಿಂದ ಬಂದ ವಿದ್ಯಾರ್ಥಿಗಳ ಎದುರು ತೆರೆದುಕೊಳ್ಳುವ ಆಯ್ಕೆಗಳು ಸೀಮಿತವಾಗಿರುತ್ತವೆ. ಅವರಿಗೆ ಯುಕ್ತ ರೀತಿಯಲ್ಲಿ ಮಾರ್ಗದರ್ಶನ ನೀಡುವವರು ಸಿಗುವುದು ಕೂಡ ಅಪರೂಪ. ಇನ್ನು ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ವಿದ್ಯಾರ್ಥಿಗಳಿಗೆ, ಸೀಮಿತ ಹಣದಲ್ಲಿ ತಾವು ಓದಬಯಸಿರುವ ಪದವಿ ಕೋರ್ಸುಗಳನ್ನು ಪೂರೈಸಲು ಸಾಧ್ಯವೇ ಎಂಬ ಪ್ರಶ್ನೆ ಕಾಡುತ್ತದೆ. ಅಂತಿಮವಾಗಿ ಅವರು ಹೆಜ್ಜೆ ಹಾಕುವುದು ಸರ್ಕಾರಿ ಕಾಲೇಜುಗಳತ್ತ. ಈ ವರ್ಗದ ವಿದ್ಯಾರ್ಥಿಗಳ ಹಿತಕಾಯುವ ಗುರುತರ ಹೊಣೆ ಸರ್ಕಾರದ ಮೇಲಿದೆ.

ಉತ್ತೀರ್ಣತೆ ಪ್ರಮಾಣ ಹೆಚ್ಚಿದೆ ಎಂಬುದೇನೊ ನಿಜ. ಆದರೆ, ಅಂಕ ಗಳಿಕೆಯಲ್ಲಿ ಅಂತರ ಇರುವುದು ಸಹಜ. ಕಡಿಮೆ ಅಂಕ ಪಡೆದವರು ಎದೆಗುಂದಬೇಕಾದ ಅಗತ್ಯ ಇಲ್ಲ. ಅಕಡೆಮಿಕ್ ಪರೀಕ್ಷೆಗಳಲ್ಲಿ ಪಡೆಯುವ ಅಂಕಗಳು ಕಲಿಕಾ ದಕ್ಷತೆಗಿಂತ ಹೆಚ್ಚಾಗಿ ಪರೀಕ್ಷೆಯಲ್ಲಿ ಕೇಳಲಾಗುವ ಪ್ರಶ್ನೆಗಳಿಗೆ ನಿರ್ದಿಷ್ಟ ಪದಗಳಲ್ಲಿ ಬರೆದು ಉತ್ತರಿಸುವ ಕೌಶಲ ಎಷ್ಟಿದೆ ಎಂಬುದನ್ನು ಮಾತ್ರ ಸೂಚಿಸುತ್ತವೆ. ಆದಕಾರಣ ಭವಿಷ್ಯ ರೂಪಿಸಿಕೊಳ್ಳಲು ಹತ್ತಾರು ಮಾರ್ಗಗಳಿವೆ, ಆಯ್ಕೆಗಳಿವೆ. ತಮ್ಮ ಆಸಕ್ತಿಗೆ ಒಪ್ಪುವ ಕೋರ್ಸ್ ಆಯ್ಕೆ ಮಾಡಿಕೊಂಡು ಅದರಲ್ಲಿ ಛಾಪು ಮೂಡಿಸಲು ವಿಪುಲ ಅವಕಾಶಗಳೂ ಇವೆ. ಅನುತ್ತೀರ್ಣರಾದವರು 'ಬದುಕು ಇಲ್ಲಿಗೆ ಮುಗಿಯಿತು' ಎಂದೇನೂ ಭಾವಿಸಬೇಕಾಗಿಲ್ಲ. ಮತ್ತೆ ಪ್ರಯತ್ನಿಸಿದರೆ ಗೆಲುವು ತಾನಾಗಿಯೇ ಎಟಕುವುದು. ಸಣ್ಣ ಅಡೆತಡೆಗಳು ಎದುರಾದಾಗ ಭರವಸೆ ಕಳೆದುಕೊಳ್ಳದಿರುವುದೇ ಭವಿಷ್ಯದ ಬದುಕಿಗೆ ಸೋಪಾನ.

ಅಂಕಗಳಿಗಿಂತ ಕೌಶಲ ಮುಖ್ಯ ಎಂಬುದನ್ನು ವಿದ್ಯಾರ್ಥಿಗಳು ಸದಾ ನೆನಪಿನಲ್ಲಿ ಇರಿಸಿಕೊಳ್ಳಬೇಕು. ಪದವಿ ಪ್ರಮಾಣಪತ್ರ ಸಿಕ್ಕಿರುತ್ತದೆ. ಆದರೆ ನೌಕರಿ ಬಯಸುವ ಕೌಶಲವನ್ನು ಬಹುಪಾಲು ಪದವೀಧರರು ಹೊಂದಿರುವುದಿಲ್ಲ ಎಂಬ ಅಂಶ ಅಧ್ಯಯನಗಳಿಂದ ಗೊತ್ತಾಗಿದೆ. ವೃತ್ತಿಬದುಕಿಗೆ ಕೌಶಲವೇ ಆಸರೆ. ಅದನ್ನು ರೂಢಿಸಿಕೊಳ್ಳುವುದು ವಿದ್ಯಾರ್ಥಿಗಳ ಆದ್ಯತೆ ಆಗಬೇಕು.

**■ ಎನ್. ಉದಯಕುಮಾರ್**